# ತತ್ವಪದಗಳ ಪಾರಂಪರಿಕತೆ ಮತ್ತು ಆಧುನಿಕತೆ

**ಗೌರಮ್ಮ ಟಿ. ರಾಜು**

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ, ಯಲಹಂಕ, ಬೆಂಗಳೂರು.

DOI: https://doi.org/10.5281/zenodo.15795627

## ABSTRACT:

ಕನ್ನಡ ಸಾಹಿತ್ಯ ತನ್ನ ಸೃಜನಶೀಲ ಶಕ್ತಿಯಿಂದ ಹಾಗೂ ಕಲ್ಪನಾಶೀಲ ಆಯಾಮಗಳಿಂದ ಸಮೃದ್ಧವಾಗಿರುವುದರ ಜೊತೆಗೆ ಈ ಲೋಕ ಮತ್ತು ಆ ಲೋಕಗಳ ಅನುಭವವನ್ನು ಹಾಗೂ ದೈವ ಪರವಾದ ನಂಬಿಕೆಗಳನ್ನು ಒಳಗೊಂಡ ಆಧ್ಯಾತ್ಮಿಕ ಸಂಗತಿಗಳನ್ನು ಜೀವದ್ರವ್ಯವಾಗಿಸಿಕೊಂಡ ವಿಶಿಷ್ಟ ಮೌಲಿಕತೆಯನ್ನು ಕೂಡ ಪಡೆದಿದೆ. ಕನ್ನಡ ಜನಪದ ಸಾಹಿತ್ಯ ಕೂಡ ಇದಕ್ಕೆ ಹೊರತಾಗಿಲ್ಲ. ದೈನಂದಿನ ಜೀವನಾನುಭವಗಳನ್ನು ಅತ್ಯಂತ ಹೃದಯಂಗಮವಾಗಿ ತಮ್ಮದೇ ಆದ ವಿಶಿಷ್ಟ ಅಭಿವ್ಯಕ್ತಿ ಕ್ರಮದಲ್ಲಿ ಸಾದರಪಡಿಸುವ ಜನಪದ ಕವಿಗಳು ಭಕ್ತಿ, ವೈರಾಗ್ಯ, ಅನುಭವ ಹಾಗೂ ಅನುಭಾವಗಳನ್ನು ತುಂಬಾ ಸಮರ್ಥವಾಗಿ ಮತ್ತು ಸಹೃದಯರ ಮನದಲ್ಲಿ ನೆಟ್ಟು ನಿಲ್ಲುವಂತೆ ಸಂಗೀತ ಮತ್ತು ಭಾಷೆಗಳ ಸಮ್ಮಿಲನದೊಡನೆ ಪ್ರಕಟಿಸಿದ್ದಾರೆ.

## KEYWORDS:

ಅನುಭಾವ, ಯುಗಧರ್ಮ, ದೀಕ್ಷಾಬದ್ಧ, ಸೌಹಾರ್ದ, ಸಮನ್ವಯ.

ಕನ್ನಡದಲ್ಲಿ ತತ್ವಪದ ಸಾಹಿತ್ಯಕ್ಕೆ ಉತ್ತರ ಕರ್ನಾಟಕದ ಜಿಲ್ಲೆಗಳು ತೌರುಮನೆಯಾಗಿವೆ. ಅನಕ್ಷರಕುಕ್ಷಿಗಳಾದ ಈ ಪ್ರದೇಶದ ಹಳ್ಳಿಯ ಜನ ಕುರಿತು ಓದಿದ ಕಾವ್ಯ ಪ್ರಯೋಗ ಪರಿಣತ ಮತಿಗಳಿಗಿಂತ ತುಂಬಾ ಸಶಕ್ತವಾದ ಹಾಗೂ ಮನೋಹರವಾದ ರೀತಿಯಲ್ಲಿ ತಮ್ಮ ಜೀವನದ ಭಾಗವೇ ಆದ ಅನುಭಾವವನ್ನು ಸಂವಹನಿಸಿದ್ದಾರೆ. ಆ ಪ್ರದೇಶದಲ್ಲಿ ಈ ಬಗೆಯ ಸಾಹಿತ್ಯ ಅತ್ಯಂತ ಸಮೃದ್ಧವಾಗಿದ್ದು ಸಂಗ್ರಹಕಾರರ, ಸಂಪಾದಕರ ಹಾಗೂ ಸಂಸ್ಕೃತಿ ಪ್ರಿಯರ ಸ್ಪರ್ಶಕ್ಕಾಗಿ ಕಾದು ನಿಂತಿದೆ. ಈ ತತ್ವಪದಕಾರರಲ್ಲಿ ಅತ್ಯಂತ ಕೆಳಸ್ತರದ ದಲಿತ ವರ್ಗದ ಅನುಭಾವಿ ಕವಿಗಳು ಇರುವುದು ಗಮನಾರ್ಹ. ಇವರು ವೇದಿಕೆಯ ಮೇಲೆ ನಿಂತು ಹಾಡುವಾಗ ಅವರ ಹಾಡುಗಳಲ್ಲಿ ಅತ್ಯಂತ ಸೂಕ್ಷ್ಮವೂ, ಹಗುರವೂ ಆದ ತತ್ವಗಳನ್ನು ಸಹಜ ಸುಂದರವಾಗಿ, ಸರಾಗವಾಗಿ ವೈವಿಧ್ಯಮಯ ನಾದದೊಡನೆ ಹೊಮ್ಮಿಸುವಾಗ ಆ ಪದಗಳ ಭಾಷೆಯ ಸಿರಿವಂತಿಕೆಯನ್ನು, ಧ್ವನಿಪೂರ್ಣತೆಯನ್ನು ಗಮನಿಸಿದಾಗ ಇವರು ಎಂತಹ ವಿದ್ವಾಂಸರು ಎನ್ನಿಸುತ್ತದೆ. ಆದರೆ ಅವರು ವೇದಿಕೆಯಿಂದ ಕೆಳಗಿಳಿದು ಬಂದ ಕೂಡಲೇ ಸಾಮಾನ್ಯರಲ್ಲಿ ಸಾಮಾನ್ಯರಾಗಿ ತಮ್ಮ ಅನಕ್ಷರತೆಯನ್ನು ಪ್ರಕಟಪಡಿಸುತ್ತಾರೆ.

ಇಂತಹ ಒಂದು ಕಾವ್ಯ ಪವಾಡ ಈ ತತ್ವಪದಕಾರರದ್ದು.

ತತ್ವಪದ ಸಾಹಿತ್ಯವನ್ನು ಅನುಭಾವ ಸಾಹಿತ್ಯ, ಕೈವಲ್ಯ ಸಾಹಿತ್ಯ ಎಂದೆಲ್ಲಾ ಗುರುತಿಸಲಾಗಿದೆ. ಬದುಕಿನ ಹಲವು ಮುಖಗಳ ಆಳದಲ್ಲಿ ಹುದುಗಿರುವ ದೇವರನ್ನು ಜಗತ್ತನ್ನು ಕುರಿತ ಅಪೂರ್ವ ಸಂವೇದನೆಗಳ ಆಧ್ಯಾತ್ಮದ ಗಾಂಭೀರ್ಯವನ್ನು ಸಾಕ್ಷಾತ್ಕರಿಸಿಕೊಂಡು ಇಲ್ಲಿ ಮೈದಳೆದಿವೆ. ಪ್ರತಿಯೊಂದು ಅನುಭವದ ತಾತ್ಕಾಲಿಕ ತಳಹದಿಯಲ್ಲಿ ಶಾಶ್ವತವಾದ ಮತ್ತು ಸಾರ್ವಕಾಲಿಕವಾದ ಒಂದು ಜೀವತತ್ವ ಅಡಕಗೊಂಡಿದೆ. ಸಾಮಾನ್ಯರಿಗೆ ಮತಿಗೋಚರವಾಗದಿರುವ ಈ ತತ್ವ ನಮ್ಮ ತತ್ವಪದಕಾರರಿಗೆ, ಅವರ ವಿಶಿಷ್ಟ ಜೀವನ ದೃಷ್ಟಿಯ ಮತ್ತು ದೈವೀಪರವಾದ ಭಾವನೆಯ ಕಾರಣದಿಂದ ಅಂಗೈಯಾಗಿದೆ. ಈ ತತ್ವಪದಗಳಲ್ಲಿ ಅಭ್ಯಾಸದಿಂದ ಮತ್ತು ಅನುಶೀಲನದಿಂದ ಬಂದ ಅನುಭವಕ್ಕಿಂತ ತಮ್ಮ ದಿನನಿತ್ಯದ ಬಾಳು ಬದುಕಿನ ಆಳದ ಸಂವೇದನೆಗಳನ್ನು, ಪಾಡುಗಳನ್ನು ಹಾಡುಗಳನ್ನಾಗಿ ಕಟ್ಟಿ ಇಲ್ಲಿ ನಿವೇದಿಸಿಕೊಂಡಿದ್ದಾರೆ.

ರಾಯಚೂರು ಜಿಲ್ಲೆಯಲ್ಲಿ ಗುರುತಿಸಲಾದ ಪ್ರಮುಖ 23 ಅನುಭಾವಿ ತತ್ವಪದಕಾರರಲ್ಲಿ ನಾಲ್ಕು ಜನ ದಲಿತ ತತ್ವಪದಕಾರರು ಗಮನಾರ್ಹರಾಗಿದ್ದಾರೆ. ತಿಪ್ಪಣ್ಣ ತಾತ, ಹೊಸೂರು ತಿಪ್ಪಣ್ಣ, ಕಲ್ಮಲಾ ತಾಯಣ್ಣ ಮತ್ತು ಯರೆಮಾರೆಪ್ಪ ಇವರೇ ಆ ತತ್ವಪದಕಾರರು.

**ತತ್ವಪದದ ವಿಶ್ಲೇಷಣೆ:**

'ತತ್ವ' ಎಂದರೆ ಸಿದ್ಧಾಂತ, ಪರಮಾತ್ಮ, ನಿಜಸ್ಥಿತಿ ಎಂದರ್ಥವಾಗುತ್ತದೆ. "ತತ್ವಜ್ಞಾನ ಮತ್ತು ಬ್ರಹ್ಮಜ್ಞಾನ"ವೆಂದು ಕರೆಯಲಾಗಿದೆ. 'ಪದ' ಎಂಬುದನ್ನು 'ಹಾಡು' 'ಹದಗೊಂಡ ಶಬ್ದ' ಎಂದು ಕರೆಯಲಾಗಿದೆ. ಪರಮಾತ್ಮನಿಗೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎನ್ನುತ್ತಾರೆ. 'ತತ್ವಪದ'ದಲ್ಲಿ ತತ್ವ ಮತ್ತು ಪದ ಇವೆರಡಕ್ಕೂ ಅರ್ಥಪೂರ್ಣವಾದ ಸಂಬಂಧವಿದೆ. 'ತತ್ವ' ವಸ್ತುವಾದರೆ 'ಪದ' ಅಭಿವ್ಯಕ್ತಿ ಮಾಧ್ಯಮ. ವಸ್ತು ಮತ್ತು ಅಭಿವ್ಯಕ್ತಿ ಇವೆರಡನ್ನೂ ಸಮನ್ವಯಗೊಳಿಸಿಕೊಂಡಿರುವ 'ತತ್ವಪದ' ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿರುವುದರ ಜತೆಗೆ ಸಂಸ್ಕೃತಿಯೊಂದರ ಪ್ರತೀಕವೂ ಆಗಿದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹುಟ್ಟಿಕೊಂಡ ತತ್ವಪದ ಸಾಹಿತ್ಯಕ್ಕೆ ತನ್ನದೇ ಆದ ಒಂದು ಪರಂಪರೆಯಿದೆ. ತತ್ವಪದ ಸಾಹಿತ್ಯ ಅಧಿಕೃತವಾಗಿ, ವಿಶೇಷ ಪ್ರಕಾರವಾಗಿ ಕಾಣಿಸಿಕೊಂಡಿದ್ದು 18-19ನೇ ಶತಮಾನದಲ್ಲಿ. ತತ್ವಪದಕಾರರು ರಚಿಸಿದ ರಚನೆಗಳಿಗೆ ತತ್ವಪದ ಸಾಹಿತ್ಯ, ಅನುಭಾವ ಸಾಹಿತ್ಯ, ಕೈವಲ್ಯ ಸಾಹಿತ್ಯ ಎಂದು ಕರೆಯಲಾಗಿದೆ. ಬದುಕಿನ ಘಟಿತ ಘಟನಾವಳಿಗೆ ಅನುಗುಣವಾಗಿ ಮೂಡಿಬಂದ ತಾತ್ವಿಕ ಮಾತು ತತ್ವಪದವಾಯಿತು. ಅನುಭವದಿಂದ ಕೂಡಿದ್ದ ತತ್ವಪದಗಳಿಗೆ ಅಥವಾ ಲೌಕಿಕ ಮತ್ತು

ಅಲೌಕಿಕ ಬದುಕನ್ನು ಅರ್ಥೈಸುವಂತಹ ಅಭಿವ್ಯಕ್ತಿಗೆ ಭಜನಿ ಪದಗಳೆಂದೂ ಕರೆದಿದ್ದಾರೆ.

ವಿಭಿನ್ನ ಸ್ತರಗಳಿಂದ ಬಂದಂತಹ ತತ್ವಪದಕಾರರು ತಮ್ಮ ಬದುಕಿನ ಅನುಭಾವಗಳನ್ನು ವಸ್ತುನಿಷ್ಠವಾಗಿ ಭಕ್ತಿ, ಜ್ಞಾನ, ವೈರಾಗ್ಯದ ನೆಲೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಗುರುಭಕ್ತಿ, ಸದಾಚಾರ, ನೈತಿಕತೆ, ಜಾತ್ಯಾತೀತತೆ, ಭಾವೈಕ್ಯತೆ, ವಸಾಹತುಶಾಹಿಯಂತಹ ವಿಚಾರಗಳನ್ನು ಕುರಿತು ವಿವೇಚಿಸಿದ್ದಾರೆ.

ಅಂದಂದಿನ ಯುಗಧರ್ಮಕ್ಕೆ ತಕ್ಕಂತೆ ಜೈನ, ವೈದಿಕ ಮತ್ತು ವೀರಶೈವ ಸಾಹಿತ್ಯ ತಮ್ಮ ತಮ್ಮ ಮತ ತತ್ವಗಳ ಪ್ರತಿಪಾದನೆಯ ಮೂಲಕ ಸಾಂಸ್ಕೃತಿಕ ಸಮಾಜದ ಮೇಲೆ ಪ್ರಭಾವ ಬೀರಿದರೆ ತತ್ವಪದಕಾರರು ತಮ್ಮ ಅನುಭವವನ್ನು ತಾತ್ವಿಕವಾಗಿ ಕಟ್ಟಿಕೊಡುವುದರ ಮೂಲಕ ಗಮನ ಸೆಳೆದಿದ್ದಾರೆ. ಜೈನ, ವೀರಶೈವ, ಬ್ರಾಹ್ಮಣ ಕವಿಗಳು ತಮ್ಮ ಮತಸಿದ್ಧಾಂತಗಳಿಗೆ ಬದ್ಧವಾಗಿ ಅಭಿವ್ಯಕ್ತಿ ಪಡೆದುಕೊಂಡರೆ ತತ್ವಪದ ಸಾಹಿತ್ಯ ಮತ ಮತ್ತು ಪಂಥಗಳನ್ನು ಮೀರಿ ವ್ಯಕ್ತಿನಿಷ್ಠ ಅನುಭವಕ್ಕೆ ಬದ್ಧವಾಗಿ ಅಭಿವ್ಯಕ್ತಿ ಪಡೆಯಿತು. ವಚನಕಾರರು ವ್ಯಕ್ತಿಯ ಅಸ್ತಿತ್ವವನ್ನು ಜ್ಞಾನದಲ್ಲಿ, ದಾಸರ ದೈವ ಭಕ್ತಿಯಲ್ಲಿ ಕಂಡರೆ ತತ್ವಪದಕಾರರು ವೈರಾಗ್ಯದಲ್ಲಿ ಮತ್ತು ಗುರುಭಕ್ತಿಯಲ್ಲಿ ಕಂಡಿದ್ದಾರೆ.

ಬೌದ್ಧರು 'ಆಸೆಯೇ ದುಃಖಕ್ಕೆ ಮೂಲ' ಎಂದು, ಜೈನರು 'ಅಹಿಂಸೆಯೇ ಪರಮಧರ್ಮ' ಎಂದು, ವೈದಿಕರು 'ಗತ್ತು ಮಿಥ್ಯ ದೇವರು ಸತ್ಯ' ಎಂದು, ವೀರಶೈವರು 'ದಯವೇ ಧರ್ಮದ ಮೂಲವಯ್ಯ', 'ಕಾಯಕ–ದಾಸೋಹ ತತ್ವವೇ ಪರಮ ತತ್ವ' ಎಂದು ಸಾರಿದರೆ, ತತ್ವಪದಕಾರರು 'ಗುರುವೇ ಅರಿವು, ಅರಿಷಡ್ ವೈರಿಗಳನ್ನು ಗೆಲ್ಲುವುದೇ ಧರ್ಮ' ಎಂದು ಸಾರಿದರು.

ತತ್ವಪದಕಾರರು ಲೌಕಿಕ ರೀತಿಯಲ್ಲಿ ಬದುಕಿದರೂ ಅಲೌಕಿಕವಾಗಿ ಮಾತನಾಡುವುದರಿಂದ ಪ್ರಮುಖರಾಗುವುದಾಗಲೀ, ಸಾಂಸಾರಿಕ ಸಂಬಂಧಗಳು ಕ್ಷಣಿಕ, ಹೆಣ್ಣು ಮಾಯೆ ಎಂದು ಅಲ್ಲಗಳೆಯುವುದರಿಂದ ಅಪ್ರಮುಖರಾಗುವುದಾಗಲೀ ಇಂದು ನಮಗೆ ಮುಖ್ಯವಾಗದೆ, ತತ್ವಪದಕಾರರು ವರ್ಣ–ವರ್ಗ, ಮತ–ಪಂಥ, ವಸಾಹತು ಶಾಹಿಗಳನ್ನು ಮೀರಿ ಬೆಳೆದು ನಿಲ್ಲುವುದರಿಂದ ಸಾಂಸ್ಕೃತಿಕವಾಗಿ ಮುಖ್ಯರಾಗುತ್ತಾರೆ. ಹೀಗಾಗಿ ವಚನಸಾಹಿತ್ಯ ಮತ್ತು ಕೀರ್ತನ ಸಾಹಿತ್ಯದಂತೆ ತತ್ವಪದ ಸಾಹಿತ್ಯವೂ ಪ್ರಸ್ತುತವೆನಿಸುತ್ತದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಈ ಮತಗಳು ಮತೀಯ ಸಂಘರ್ಷದ ಹಿನ್ನೆಲೆಯಲ್ಲಿ ಹುಟ್ಟಿದ್ದರೆ, ತತ್ವಪದ ಸಾಹಿತ್ಯ ಅಂದಿನ ಮಾನಸಿಕ ಒತ್ತಡಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟಿದೆ.

ಕರ್ನಾಟಕದ ಗುರು ಸ್ವರೂಪಿಗಳು ಎಂದು ಕಾಣಬೇಕಾದವರು ನಿಶ್ಚಿತವಾಗಿ ಅಲ್ಲಮಪ್ರಭು, ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ನಿಜಗುಣ ಶಿವಯೋಗಿ

ಮುಂತಾದವರು. ಇಡೀ ಬಯಲುಸೀಮೆಯ ತತ್ವಪದಕಾರರಲ್ಲಿ ಶಂಕರಾನಂದ ಯೋಗಿ, ಚಿದಾನಂದಾವಧೂತ, ಅಲ್ಲಮಪ್ರಭು, ಮಂಟೇಸ್ವಾಮಿ, ತಿಂತಿಣಿ ಮೋನಪ್ಪಯ್ಯ ಮುಂತಾದವರು. ಈ ಪಟ್ಟಿ ಇಲ್ಲಿಗೇ ಮುಗಿಯುವುದಿಲ್ಲ, ಆದರೆ ಇವರೆಲ್ಲರ ಬಗ್ಗೆ ನಮ್ಮ ಓದುಗರು ಮೌನ ವಹಿಸುತ್ತಲೇ ಬಂದಿದ್ದಾರೆ. ಲಕ್ಷಾಂತರ ಜನರು ನಡೆದುಕೊಳ್ಳುವ ಕೊಡೇಕಲ್, ಸಾವಳಗಿ, ಶಿರಹಟ್ಟಿ, ತಿಂತಿಣಿ, ಚಿಕ್ಕೆಲ್ಲೂರು, ಬೊಪ್ಪಗೌಡನಪುರ ಇವುಗಳು ಕರ್ನಾಟಕದ ಸಾಂಸ್ಕೃತಿಕ ನಕಾಶೆಯಲ್ಲಿ ಜಾಗ ಪಡೆಯಲೇ ಇಲ್ಲ. ಸೂಫಿ ಸಂತರ ಕ್ಷೇತ್ರಗಳ ಸ್ಥಿತಿ ಇವಕ್ಕಿಂತ ಭಿನ್ನವೇನಲ್ಲ. ಆದರೇನಂತೆ, ಸಮೂಹ ಮಾತ್ರ ಇವರನ್ನು ತಾವು ಸೇರುವ ಗುಡಿ ಮಂಟಪಗಳಲ್ಲಿ, ಗದ್ದುಗೆಗಳಲ್ಲಿ, ಸೂಫಿ ಸಂತರ ಸಮಾಧಿಗಳಲ್ಲಿ ಮತ್ತು ತಮ್ಮ ಬದುಕಿನ ನಡುವೆ ಪ್ರೀತಿಯಿಂದ ಪೋಷಿಸುತ್ತಾ ಬಂದಿದೆ.

ತತ್ವಪದಕಾರರ ಪರಂಪರೆಯು ಜೀವಂತ ಪರಂಪರೆಯಾಗಿರುವುದರಿಂದ ಈ ಪಂಥದ ಆಚರಣೆ, ವಿಧಿ ವಿಧಾನಗಳು ಮತ್ತು ಯಥೇಚ್ಛವಾಗಿ ದೊರಕುವ ಸಾಹಿತ್ಯವು ಈ ಪಂಥದ ತಾತ್ವಿಕತೆಯನ್ನು ಅರಿತುಕೊಳ್ಳಲು ಸಹಾಯ ಮಾಡುತ್ತವೆ.

**ಅದರಲ್ಲಿನ ಪ್ರಮುಖ ಸಮಾನ ತಾತ್ವಿಕಾಂಶಗಳನ್ನು ಹೀಗೆ ಪಟ್ಟಿ ಮಾಡಬಹುದು:**

ಇವೆಲ್ಲ ಗುರು ಪಂಥಗಳು. ಇಲ್ಲಿ ಗುರುವೇ ಸರ್ವಸ್ವ, ತನ್ನ ಸಾಧನೆಗೆ ಮಾರ್ಗದರ್ಶನಕ್ಕಾಗಿ ಗುರುವೊಬ್ಬ ಬೇಕೇ ಬೇಕು. ಗುರುವಿಲ್ಲದೆ ಸಾಧನೆಯ ಚಕ್ರ ಪೂರ್ತಿಯಾಗುವುದಿಲ್ಲ. ಗುರು ಶಿವ ಸ್ವರೂಪಿಯಾದವನು. ಅರಿವಿನ ಮೂರ್ತ ರೂಪ. ವ್ಯಕ್ತಿ ರೂಪದ ಗುರು ಸಂಕೇತ ಮಾತ್ರ, ನಿಜವಾಗಿ ಅರಿವೇ ಗುರು. ಗುರುವಿನಿಂದ ದೀಕ್ಷೆ ತೆಗೆದುಕೊಂಡವರನ್ನು 'ಗುರುಮಕ್ಕಳು' ಎಂದು ಗುರುತಿಸುತ್ತಾರೆ. ಇದು ಯಾವುದೇ ಒತ್ತಾಯವಿಲ್ಲದೆ ಮಾಡಿಕೊಳ್ಳುವ ಸ್ವಾತಂತ್ರ್ಯ ಶಿಷ್ಯನಿಗಿರುವಂತೆಯೇ ಗುರುವಿಗೆ ಶಿಷ್ಯನ ಆಯ್ಕೆಯ ಸ್ವಾತಂತ್ರ್ಯವಿದೆ.

ಬೌದ್ಧ, ನಾಥ, ಕಾಪಾಲಿಕ, ಶೈವ, ಶಾಕ್ತ, ಅದ್ವೈತ, ಸೂಫಿ, ವೀರಶೈವ, ಶಾಂಕರ, ಅದ್ವೈತ ಮತ್ತು ವೈಷ್ಣವ ಭಕ್ತಿಪಂಥಗಳ ಪ್ರಭಾವಗಳ ಅನೇಕ ಅಂಶಗಳು ಇಲ್ಲಿ ಬೆರೆತು ಹೋಗಿರುವುದರಿಂದ ತತ್ವಪದಕಾರನೊಬ್ಬನ ತತ್ವ ಮಾರ್ಗವನ್ನು ನಿಖರವಾಗಿ ಗುರುತಿಸುವುದು ಕಷ್ಟಸಾಧ್ಯ.

ತತ್ವಪದಕಾರರಿಗೆ ಧರ್ಮದ, ಜಾತಿಯ, ಭಾಷೆಯ ಗಡಿಗಳಿಲ್ಲ. ಜಾತಿ–ಧರ್ಮದ ಎಲ್ಲೆಗಳನ್ನು ದಾಟಿದ ವಿಶ್ವಮಾನವ ಪ್ರಜ್ಞೆ ಅವರದ್ದು.

ತತ್ವಪದಕಾರರಲ್ಲಿ ಲಿಂಗ ಅಸಮಾನತೆಗೆ ಸ್ಥಳವಿಲ್ಲ. ಆದರೆ ಅವರಲ್ಲಿ ಗುಪ್ತವಾಗಿ ಇರಬಹುದಾದ ಸಾಧನೆಯಲ್ಲಿ ಹೆಣ್ಣು ಬಹಳ ಸಾರಿ 'ಮುದ್ರಿಕೆಯಾಗಿ'

ಬಳಕೆಗೊಂಡಂತಿದೆ. ಈ ಪಂಥವು ಹೆಣ್ಣು ಮೋಕ್ಷದ ಸಾಧನೆಯಲ್ಲಿ ಸಮಾನ ಅರ್ಹಳೆಂದು ಭಾವಿಸುತ್ತದೆ.

ತತ್ವಪದಕಾರರಿಗೆ 'ಸಂಸಾರ' ನಿಷಿದ್ಧವಲ್ಲ. ಅವರೂ ಎಲ್ಲರಂತೆ ಕುಟುಂಬಿಗಳು. ಕುಟುಂಬದ ಪ್ರೀತಿ-ವಿಶ್ವಾಸಗಳನ್ನು ಗೌರವಿಸುತ್ತಾರೆ. ಸಂಸಾರದೊಳಗಿದ್ದೇ ಪರಮಾರ್ಥವನ್ನು ಕಾಣಬಹುದೆಂದು ನಂಬುತ್ತಾರೆ.

ಗುರುವಿನಿಂದ ದೀಕ್ಷಾಬದ್ಧರಾದ ಸಾಧಕರು ನಿರಂತರ ಸಾಧನೆಯ ಹಾದಿಯಲ್ಲಿರುತ್ತಾರೆ. ನಿಗದಿತ ಸಮಯಗಳಲ್ಲಿ ಅವರೆಲ್ಲ ಒಟ್ಟಿಗೇ ಸೇರಿ ತತ್ವಚಿಂತನೆ ನಡೆಸುತ್ತಾರೆ. ಅದು ಹತ್ತಿರದ ಬೆಟ್ಟದ ಗವಿಗಳಾಗಬಹುದು, ಪಾಳು ಗುಡಿಗಳಾಗಬಹುದು, ಊರಿನ ದೇವಸ್ಥಾನಗಳಾಗಬಹುದು. ಅಲ್ಲಿ ಸೇರಿ ತತ್ವಪದಗಳನ್ನು ಹಾಡುತ್ತಾರೆ. ತತ್ವ ಚಿಂತನೆ ನಡೆಸುತ್ತಾರೆ. ಇಲ್ಲಿ ನಡೆಸುವ ತತ್ವ ಜಿಜ್ಞಾಸೆಯನ್ನು 'ತತ್ವಕ್ಕೆ ಹಾಕುವುದು' ಎನ್ನುತ್ತಾರೆ. ಸಾಮಾನ್ಯವಾಗಿ ಅಮಾವಾಸ್ಯೆ, ಹುಣ್ಣಿಮೆ ಮತ್ತು ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ತತ್ವಸಾಧಕರೆಲ್ಲ ಒಟ್ಟಿಗೆ ಸೇರುತ್ತಾರೆ.

ಸಾವಿನ ಸಂದರ್ಭದಲ್ಲಿ ದೀಕ್ಷೆ ಪಡೆದ ಸಾಧಕರೆಲ್ಲ ಸೇರುತ್ತಾರೆ. ಕುಲ-ಜಾತಿಯ ಕಟ್ಟುಕಟ್ಟಳೆ ಇರುವುದಿಲ್ಲ. ಸಾವನ್ನು ಶೋಕವನ್ನಾಗಿ ಆಚರಿಸುವುದಿಲ್ಲ. ಬದಲಿಗೆ ಒಂದೆಡೆ ಕುಳಿತು ತತ್ವ ಹಾಡುತ್ತಾರೆ. ಉತ್ತರ ಕ್ರಿಯಾದಿಗಳಲ್ಲಿ ಎಲ್ಲರೂ ಭಾಗವಹಿಸುತ್ತಾರೆ. ಗುರುಮಕ್ಕಳನ್ನು ಎಲ್ಲರೂ ಮುಟ್ಟಿ ಸಂಸ್ಕಾರ ಮಾಡುತ್ತಾರೆ. ಜಾತ್ಯಾತೀತವಾದ ಜೀವಂತ ಪರಂಪರೆಯೊಂದು ಈ ನೆಲದಲ್ಲಿ ಇದೆ ಎನ್ನುವುದಾದರೆ ಅದು ತತ್ವಪದಕಾರರ ಪರಂಪರೆ ಮಾತ್ರ. ವರ್ಷಕ್ಕೊಮ್ಮೆ ಅಥವಾ ನಿರ್ದಿಷ್ಟ ಸಮಯದಲ್ಲಿ ಗುರುಶಿಷ್ಯರೆಲ್ಲ ಸೇರಿ ಗುರು ಕಾರ್ಯವನ್ನು ನಡೆಸುತ್ತಾರೆ.

ಇದೊಂದು ನಡೆ-ನುಡಿ ಸಿದ್ಧಾಂತದ ಪರಂಪರೆ. ತತ್ವಪದಗಳು ಅವರ ಸಾಧನೆಯ ಹಾದಿಯ ಉಪ-ಉತ್ಪನ್ನಗಳು ಮಾತ್ರ, ಮೊದಲು ನಡೆ, ನಂತರ ನುಡಿ.

ಇಡೀ ಪರಂಪರೆಗೆ ಸಾಮೂಹಿಕ ಚಹರೆ ಇದೆ. ವೈಯಕ್ತಿಕ ಮುಕ್ತಿ ಈ ಪಂಥಕ್ಕೆ ಮುಖ್ಯವಲ್ಲ. ಕುಟುಂಬ ಸಮೇತ, ಇಂದ್ರಿಯ ಸಮೇತ ಬಾಳುವ ಮನುಷ್ಯನ ಬಿಡುಗಡೆಯ ಮಾರ್ಗಕ್ಕಾಗಿ ಹಂಬಲಿಸುವ ಪಂಥ ಇದು. ಹಾಗಾಗಿ ಎಲ್ಲ ತತ್ವಪದಕಾರರ ರಚನೆಗಳು ಬಹುಪಾಲು ಗುರುವಿನ ಅಂಕಿತವನ್ನೋ, ತನ್ನ ನೆಲದ ನಂಬಿಕೆಯ ದೈವದ ಅಂಕಿತವನ್ನೋ ಕೊಡಿರುತ್ತವೆ.

ತತ್ವಪದಗಳು ಸಂಗೀತ ರಚನೆಗಳು. ಕೆಲವು ತತ್ವಪದಗಳಿಗೆ ನಿರ್ದಿಷ್ಟ ರಾಗ-ತಾಳಗಳ ಸೂಚನೆಯಿರುತ್ತದೆ. ಒಂದೇ ಹಾಡಿಗೆ ಅನೇಕ ಪಠ್ಯಗಳಿರಬಹುದು. ಸಾಮಾನ್ಯವಾಗಿ ತತ್ವಪದಗಳಿಗೆ ಅಂಕಿತವಿರುತ್ತದೆ.

ತತ್ವಪದಗಳನ್ನು ಏಕತಾರಿಯ ಜೊತೆ ಹಾಡುತ್ತಾರೆ. ಸಮೂಹದಲ್ಲಿ ಹಾಡುವಾಗ ಕಂಜರಿ ಅಥವಾ ದಮ್ಮಡಿ ಇರುತ್ತದೆ. ಇವೆರಡು ಇದ್ದರೆ ಸಾಕು, ತತ್ವಪದದ ನದಿ ತುಂಬಿ ಹರಿಯುತ್ತದೆ. ಇತ್ತೀಚೆಗೆ ತತ್ವಪದ ಹಾಡಿಗೆ ಹಾರ್ಮೋನಿಯಂ, ತಬಲ ಮತ್ತು ಅನೇಕ ರೀತಿಯ ತಾಳವಾದ್ಯಗಳು ಬಳಕೆಯಾಗುತ್ತಿವೆ. ಉತ್ತರ ಕರ್ನಾಟಕದ ಅನೇಕ ಕಡೆಗಳಲ್ಲಿ ಜಾನಪದ ಹಾಡಿನ ಅನೇಕ ಪ್ರಕಾರಗಳೂ ಬಳಕೆಯಾಗುತ್ತಿವೆ.

ಪ್ರತಿ ಹಾಡಿನ ಪ್ರಾರಂಭದಲ್ಲಿ ಪಲ್ಲವಿಯಿದ್ದು, ಅಪರೂಪಕ್ಕೆ ವಿಶೇಷಾರ್ಥವನ್ನು ಸೂಚಿಸಲು ಅನುಪಲ್ಲವಿಯೂ ಇರುತ್ತದೆ. ಪಲ್ಲವಿಯಿಲ್ಲದ ಹಾಡುಗಳೂ ಅಲ್ಲಲ್ಲಿ ದೊರೆಯುತ್ತವೆ. ಪ್ರತಿ ನುಡಿಯ ಕೊನೆಗ ಆವರ್ತನಗೊಳ್ಳುವ ಪಲ್ಲವಿ ಪದ್ಯದ ನಡೆಯನ್ನು ನಿರ್ದೇಶಿಸುತ್ತದೆ. ತತ್ವಪದವನ್ನು ಹಾಡುವಾಗ ಒಂದು ಹಂತದಲ್ಲಿ ತಾಳ ಬದಲಾಗುತ್ತದೆ. ಏಕತಾನತೆಯನ್ನು ಭಂಗಗೊಳಿಸಿ ತನ್ಮಯತೆಯನ್ನು ತರಲು ಇಂತಹ ಬದಲಾವಣೆಗಳನ್ನು ತರುತ್ತಾರೆ.

ತತ್ವಪದಗಳಲ್ಲಿ ಸಾಮಾನ್ಯವಾಗಿ ಕೊನೆಯ ಚರಣದಲ್ಲಿ ಅಂಕಿತವಿರುತ್ತದೆ. ಅಂಕಿತವಿಲ್ಲದ ತತ್ವಪದಗಳು ಅಪರೂಪ. ತತ್ವಪದದ ಅಂಕಿತವನ್ನು ಎಚ್ಚರದಿಂದ ಗುರುತಿಸಿಕೊಳ್ಳಬೇಕು. ತತ್ವಪದಕಾರರು ಸಾಮಾನ್ಯವಾಗಿ ತನ್ನ ಗುರುತನ್ನು ನೀಡುವುದು ಈ ಅಂಕಿತದ ಮೂಲಕವೇ. ಅಂಕಿತಕ್ಕೆ ತನ್ನ ಗುರುವನ್ನು ಅಥವಾ ಸ್ಥಳೀಯ ದೈವ ಸಂಕೇತಗಳನ್ನು ಬಳಸಿಕೊಳ್ಳುವುದು ರೂಢಿ. (ಶರೀಫ ಸ್ಥಳೀಯ ದೈವವಾದ ಶಿಶುನಾಳಾದೀಶನನ್ನು, ಶಂಕರಾನಂದ ಯೋಗಿ ತನ್ನ ಗುರುವಾದ ಮಹಲಿಂಗರಂಗನನ್ನು, ಕಡಕೋಳ ಮಡಿವಾಳಪ್ಪ ತನ್ನ ಗುರುವಾದ ಮಹಾಂತೇಶನನ್ನು ಅಂಕಿತದ ಮೂಲಕ ಸ್ಮರಿಸಿಕೊಳ್ಳುತ್ತಾರೆ).

ಸಾಮಾನ್ಯವಾಗಿ ನಾಲ್ಕು ಸಾಲುಗಳ ನುಡಿ ಅಥವಾ ಪದಗಳಿದ್ದು ಒಮ್ಮೊಮ್ಮೆ ಮೂರು, ಆರು, ಅಪರೂಪಕ್ಕೆ ಎರಡು ಸಾಲುಗಳನ್ನು ಒಳಗೊಂಡ ನುಡಿಗಳೂ ದೊರೆಯುತ್ತವೆ. ಪ್ರತಿ ಹಾಡಿಗೆ ಒಂದಕ್ಕಿಂತ ಹೆಚ್ಚು ನುಡಿಗಳಿದ್ದು ಮೂರು, ಐದು, ಏಳು, ಹನ್ನೊಂದು, ಹದಿಮೂರು ಹೀಗೆ ಸಾಮಾನ್ಯವಾಗಿ ಬೆಸ ಸಂಖ್ಯೆಯ, ಅಪರೂಪಕ್ಕೆ ಸರಿ ಸಂಖ್ಯೆ ನುಡಿಗಳನ್ನೊಳಗೊಂಡ ತತ್ವಪದಗಳು ಸಿಗುತ್ತವೆ. ನುಡಿಗಳಲ್ಲಿ ಸಾಮಾನ್ಯವಾಗಿ ತತ್ವ ನಿರೂಪಣೆಯಿರುತ್ತದೆ. ಸ್ತುತಿ ರೂಪದ ತತ್ವಪದಗಳೂ, ಗುರು ಪಾರಮ್ಯವನ್ನು ಹೇಳುವ ತತ್ವಪದಗಳೂ ಹೇರಳವಾಗಿ ಸಿಗುತ್ತವೆ.

ಸಾಮಾನ್ಯವಾಗಿ ಎಲ್ಲ ತತ್ವಪದಗಳಿಗೆ ರಾಗ ನಿರ್ದೇಶನವಿದ್ದು, ವಿರಳವಾಗಿ ತಾಳ ನಿರ್ದೇಶನವಿರುತ್ತದೆ. ರಾಗ-ತಾಳಗಳ ನಿರ್ದೇಶನವಿಲ್ಲದ ಪದಗಳೂ ಲಭ್ಯವಾಗಿವೆ. ಒಮ್ಮೊಮ್ಮೆ ಒಂದೇ ತತ್ವಪದಕ್ಕೆ ಬೇರೆ ಬೇರೆ ರಾಗಗಳ ನಿರ್ದೇಶನವಿರುವ ಉದಾಹರಣೆಗಳೂ ಇವೆ. ತತ್ವಪದಕಾರರು ಸಾಮಾನ್ಯವಾಗಿ ಸೂಚಿಸುವ ರಾಗಗಳೆಂದರೆ;

ಧನ್ಯಾಸಿ, ಶಾಂತಮಲಹರಿ, ಮಧುಮಾಧವಿ, ಮಲಹರಿ, ದೇಶಿ, ಭೈರವಿ, ಭೂಪಾಳಿ, ವರಾಳಿ, ಗುಜ್ಜರಿ, ನಾಟಿ, ಲಲಿತೆ, ದೇಶಾಕ್ಷಿ, ನಾದನಾಮಕ್ರಿ, ಢವಲಾರ, ಶೋಕವರಾಳಿ, ರೇಗುಪ್ತಿ, ಆರಭೀ, ಕನ್ನಡಗೌಳ, ಸೌರಾಷ್ಟ್ರ, ಸಂದೂರಾಮಕ್ರಿ, ಶಂಕರಾಭರಣ, ಕಾಂಭೋಜಿ, ಪಹಾಡಿ, ತಲುಗು ಕಾಂಭೋಜಿ, ಮುಖಾರಿ, ಪುನ್ನಾಗ, ತೋಡಿ, ಬೇಗಡೆ, ಕುರಂಜಿ, ಹಿಂದೋಳ, ವಸಂತ, ಕಲ್ಯಾಣಿ, ಕೇತಾರಗೌಳ, ಶ್ಯಾಮ, ದಿಜಾವಂತಿ, ಸಾರಂಗ, ಮಾರವಿ, ಸಾವೇರಿ, ಮುಂತಾದವುಗಳು. ತಾಳಗಳೆಂದರೆ; ರೂಪಕ, ಝಂಪೆ, ಆಟತಾಳ, ನಿರ್ದಿಷ್ಟ ರುಜ್ಜಿತಾಳ. ತತ್ವಪದಗಳಿಗೆ ರಾಗ ತಾಳಗಳ ಸೂಚಿಯಿದ್ದರೂ ಅವು ಹಾಡುವ ನಿರ್ದಿಷ್ಟ ಮಟ್ಟವನ್ನು ಸೂಚಿಸುತ್ತವೆಯೇ ಹೊರತು ಅದೇ ರಾಗದಲ್ಲಿ ಹಾಡಬೇಕೆಂಬ ಒತ್ತಾಯವೇನೂ ಇದ್ದಂತಿಲ್ಲ.

ತತ್ವಪದಗಳು ವಿಶೇಷವಾಗಿ ಅಂಶ ಗಣದ ಕರ್ನಾಟಕ ವಿಷಯ ಜಾತಿ ಛಂದಸ್ಸಿನ ಏಳೆ, ತ್ರಿಪದಿ, ಉತ್ಸಾಹ, ಛಂದೋವಸಂತ, ಅಕ್ಕರ, ಷಟ್ಪದಿ, ಚೌಪದಿ ಹಾಗೂ ಅಪರೂಪವಾಗಿ ಅಕ್ಕರಿಕೆಗಳಲ್ಲಿ ಇರುತ್ತವೆ. ಮಾತ್ರಾಗಣದ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಷಟ್ಪದಿಗಳನ್ನೂ, ಸೀಸ, ಸಾಂಗತ್ಯ ಮುಂತಾದ ಛಂದಗಳನ್ನೂ ಬಳಸುವುದುಂಟು. ಅನೇಕ ಕಡೆ ಅವು ಸ್ವಚ್ಛಂದವಾಗಿಯೂ ಇವೆ.

**ಹೈದ್ರಾಬಾದ್ ಕರ್ನಾಟಕದ ಆಯ್ದ ತತ್ವಪದಕಾರರ ಸಂಕ್ಷಿಪ್ತ ಪರಿಚಯ ಹಾಗೂ ತತ್ವಪದ ಸಾಹಿತ್ಯ:**

ಕಲಬುರ್ಗಿ, ಬೀದರ, ಯಾದಗೀರ, ಕೊಪ್ಪಳ, ರಾಯಚೂರು ಮುಂತಾಗಿ ಹೈದ್ರಾಬಾದ್ ಕರ್ನಾಟಕವೆಂದು ಗುರುತಿಸಿಕೊಳ್ಳುತ್ತಿರುವ ಈ ಭಾಗವು ಎರಡು ಸಾವಿರ ವರ್ಷಗಳ ದೀರ್ಘ ಅವಧಿಯಲ್ಲಿ ಹಲವು ಸ್ಥಿತ್ಯಂತರಗಳನ್ನು ಕಂಡಿದೆ. ಈ ಭಾಗದಲ್ಲಿ ಕನ್ನಡದಲ್ಲಿ ಸಾಹಿತ್ಯ ರಚನೆಯಾಗುತ್ತಿರುವ ಸಂದರ್ಭದಲ್ಲಿಯೇ ಉರ್ದುವಿನಲ್ಲಿಯೂ ಶೇರ, ಶಾಯಿರಿ, ಕವ್ವಾಲಿ, ಗಜಲ್ ಮುಂತಾದ ಪ್ರಕಾರಗಳು ರಚನೆಯಾಗತೊಡಗಿದ್ದವು. ಹದಿನಾಲ್ಕನೆಯ ಶತಮಾನದಲ್ಲಿ ಉತ್ತರದಿಂದ ಬಂದ ಖಾಜಾ ಬಂದೇ ನವಾಜ ಗೇಸುದರಾಜ್ ಅವರ ಪ್ರಥಮ ದಖ್ಖನಿ ಕೃತಿಯನ್ನು ರಚಿಸಿ ಆ ಭಾಷೆಗೊಂದು ಪರಂಪರೆ ನಿರ್ಮಿಸಿದರು. ಈ ನೆಲದಲ್ಲಿ ಕಾಲಕಾಲಕ್ಕೂ ಹತ್ತಾರು ಸೂಫಿಗಳು ಕಾಣಿಸಿಕೊಂಡರಲ್ಲದೆ ಇವರಲ್ಲಿ ಅನೇಕರು ಕನ್ನಡದಲ್ಲಿ ಕೃತಿಗಳನ್ನು ಬರೆದು ಸೌಹಾರ್ದ ಪರಂಪರೆಯೊಂದನ್ನು ಖಾಯಂಗೊಳಿಸಿದ್ದಾರೆ.

**1. ಕಡಕೋಳ ಮಡಿವಾಳಪ್ಪ:**

ಕ್ರಿ.ಶ. ಸುಮಾರು 1755 ರಿಂದ 1876 ರ ಮಧ್ಯದಲ್ಲಿ ಬಾಳಿದ್ದ ಮಡಿವಾಳಪ್ಪನವರ ಜನನವೇ ಹಲವು ಸಂಕಟಗಳನ್ನು ತಂದೊಡ್ಡಿತ್ತು. ಇವರ ತಾಯಿ ಗಂಗಮ್ಮ ಬಾಲ ವಿಧವೆ. ಈಗಿನ ವಿಜಯಪುರ ಜಿಲ್ಲೆಯ ಇಚಿಡಿ ತಾಲ್ಲೂಕಿನಲ್ಲೊಂದು ಪುಟ್ಟ ಹಳ್ಳಿ

ನಾರತಾಣ. ಅಲ್ಲಿಯ ಗಾಣಿಗರ ಮನೆತನದ ಕೂಲಿ ಕಾರ್ಮಿಕ ಕುಟುಂಬದಲ್ಲಿ ಜನಿಸಿದ ಈಕೆಗೆ ಆಗಿನ ಸಂಪ್ರದಾಯದಂತೆ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಗಿತ್ತು. ಹರೆಯಕ್ಕೆ ಬರುವಷ್ಟರಲ್ಲಿ ಗಂಡ ಶಿವನ ಪಾದ ಸೇರಿದನು. ತದನಂತರ ಗಂಗಮ್ಮ ತನ್ನ ತಂದೆಯೊಂದಿಗೆ ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಬಿದನೂರಿನಲ್ಲಿಯೇ ಕೂಲಿ ಮಾಡುತ್ತಾ ಜೀವನ ಸಾಗಿಸುತ್ತಾರೆ.

ತಂದೆ ತೀರಿಕೊಂಡ ನಂತರ ಅಕ್ಷರಶಃ ಅನಾಥೆಯಾದ ಗಂಗಮ್ಮಳಿಗೆ ಮಠದ ಸ್ವಾಮಿ ವಿರೂಪಾಕ್ಷಯ್ಯನವರು ಕರುಣೆ ತೋರಿಸುತ್ತಾರೆ. ಸ್ವಾಮಿಗಳ ಸೇವೆ ಮಾಡುತ್ತ ಇಬ್ಬರಲ್ಲಿ ಕರುಣೆ ಪ್ರೇಮವಾಗಿ ತಿರುಗಿ ನಿಸರ್ಗದ ನಿಯಮದಂತೆ ಬಸುರಿಯಾಗುತ್ತಾಳೆ, ಸಮಾಜದ ನಿಂದನೆ ತಿರಸ್ಕಾರಕ್ಕೆ ಗುರಿಯಾಗುತ್ತಾಳೆ. ಗರ್ಭ ಇಳಿಸಿಕೊಳ್ಳುವ ದಾರಿಯಿಲ್ಲದೆ ಜೀವನವನ್ನೇ ಕೊನೆಗಾಣಿಸಬೇಕೆಂಬಷ್ಟರಲ್ಲಿ ಆ ಊರಿನ ಪೊಲೀಸ್ ಗೌಡನಾಗಿದ್ದ ಮಲ್ಲಿಕಾರ್ಜುನ ಗಂಗಮ್ಮನಿಗೆ ಧೈರ್ಯ ತುಂಬಿ ಆಸರೆಯಾಗಿ ನಿಲ್ಲುತ್ತಾನೆ. ಮಡಿವಾಳಪ್ಪ ಹುಟ್ಟಿ ಬೆಳೆದು ನಿಲ್ಲುತ್ತಾನೆ, ಊರಿನವರು ತಾಯಿ ಮತ್ತು ತನಗೆ ಆಗುತ್ತಿದ್ದ ನಿಂದನೆಯಿಂದ ಮನನೊಂದು ತರುಣ ಮಡಿವಾಳ ಜಾತಿವಾದಿ ಜಂಗಮ ಮತ್ತು ಕರ್ಮಠ ವೀರಶೈವರನ್ನು ವಿರೋಧಿಸಿ ನಾಲ್ಕು ತತ್ವಪದಗಳನ್ನು ಬರೆದು ಸನಾತನವಾದಿಗಳ ನೀರಿಳಿಸಿ ಅಲ್ಲಿಂದ ದೇಶಾಂತರ ಹೊರಟು ಬಿಡುತ್ತಾನೆ.

ಈತ ಹಾಡಿದ ತತ್ವಪದಗಳಲ್ಲಿಯೇ ಇಂದಿಗೂ ಜನರ ಬಾಯಿಯಲ್ಲಿ ಉಳಿದಿರುವುದು "ಮೂಕನಾಗಬೇಕು ಜಗದೋಳು ಜ್ವಾಕ್ಯಾಗ್ ಇರಬೇಕು" ಎಂಬುದಾಗಿದೆ.

ಹೀಗೆ ಹೊರಟ ಆತ ಎಲ್ಲೆಂದರಲ್ಲಿ ಸಂಚರಿಸುತ್ತ ಶ್ರೀಶೈಲದ ಅಂಚಿನವರೆಗೂ ಪಾದರಸದಂತೆ ಹರಿದಾಡಿ ಆರೂಢ, ಅವಧೂತ, ನಾಥ, ಸಿದ್ಧ ಪರಂಪರೆಗಳೊಂದಿಗೆ ಅನುಸಂಧಾನಗೈಯುತ್ತಾನೆ. ಕೆಳಗಿನ ತತ್ವಪದ ಈಗಿನ ಆಧುನಿಕ ಯುಗಕ್ಕೂ ಒಪ್ಪುವಂತಿದೆ.

**ಮೂಕನಾಗಬೇಕು...**<br>
**ಜಗದೊಳು ಜ್ವಾಕ್ಯಾಗಿರಬೇಕು...**<br>
**ಮೂಕನಾಗಬೇಕು...**<br>
**ಜಗದೊಳು ಜ್ವಾಕ್ಯಾಗಿರಬೇಕು...**<br>
**ಕಾಕಬುದ್ಧಿ ಕಡೇ ಘಾಯಿಸಲಾರದೆ**<br>
**ಕಾಕಬುದ್ಧಿ ಕಡೇ ಘಾಯಿಸಲಾರದೆ**<br>
**ಲೋಕದ ಗೊಡವೀ...**<br>
**ನಿನಗ್ಯಾಕ ಬೇಕು**<br>
**ಮೂಕನಾಗಬೇಕು**

**ಮಾತು ಕಲಿಯ ಬೇಕೂ...**
**ಮಾತಿನ... ಮರ್ಮ ತಿಳೀ... ಬೇಕು**
**ಮಾತು ಕಲಿಯ ಬೇಕೂ...**
**ಮಾತಿನ... ಮರ್ಮ ತಿಳೀಬೇಕು**
**ಮಾತು ಬಲ್ಲ... ಮಹಾ ಜ್ಞಾನಿಯು ಕೂಡ**
**ಮಾತು ಬಲ್ಲ... ಮಹಾ ಜ್ಞಾನಿಯು ಕೂಡ**
**ಕೋತಿ ಹಾಂಗ... ಬೆನ್ ಹತ್ತಿರಬೇಕು**
**ಮೂಕನಾಗಬೇಕು...**
**ಜಗದೊಳು ಜ್ವಾಕ್ಯಾಗಿರಬೇಕು...**
**ತತ್ವ ಕಲೀಬೇಕೂ...**
**ತತ್ವದಾ... ಅರ್ಥಾ ತಿಳೀಬೇಕು**
**ತತ್ವ ಕಲೀಬೇಕೂ...**
**ತತ್ವದಾ... ಅರ್ಥಾ ತಿಳೀಬೇಕು**
**ತತ್ವ ಬಲ್ಲ... ಮಹಾ ಜ್ಞಾನಿಯು ಕೂಡ**
**ಮೂಕನಾಗಬೇಕು...**
**ಜಗದೊಳು ಜ್ವಾಕ್ಯಾಗಿರಬೇಕು...**
**ಆಸೆಯನಳೀಬೇಕೂ...**
**ಮನಸಿನಾ... ಹೇಸಿಕಿ ತೋಳೀಬೇಕು...**

**2. ತಿಪ್ಪಣ್ಣ ತಾತಾ:**

ತಿಪ್ಪಣ್ಣ ರಾಯಚೂರು ತಾಲ್ಲೂಕಿನ ಮಲಿಯಾಬಾದ ಗ್ರಾಮದಲ್ಲಿ ಕ್ರಿ.ಶ. 1940ರಲ್ಲಿ ಜನಿಸಿದನು. ಈತನ ತಂದೆ ಫಕೀರಪ್ಪ ಮತ್ತು ತಾಯಿ ಲಕ್ಷ್ಮಮ್ಮ. ಮಾದಿಗರ ಜನಾಂಗದಲ್ಲಿ ಹುಟ್ಟಿದ ತಿಪ್ಪಣ್ಣ ತಾತಾನ ಗುರು ರಾಜೂರು ಹನುಮೇಶಪ್ಪ, ಈತನು ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ರಾಜೂರು ಗ್ರಾಮದವನು. ತಿಪ್ಪಣ್ಣ ಗುರು ಹನುಮೇಶನಿಂದ ದೀಕ್ಷೆ ಪಡೆದ ನಂತರ ತಪ್ಪಣ್ಣನಾಗಿದ್ದವನು ತಿಪ್ಪಣ್ಣ ತಾತನಾದನು. ಈತ ರಾಯಚೂರು ನಗರದ ಮಂಗಳವಾರ ಪೇಟೆ ಸರಕಾರಿ ಶಾಲೆಯಲ್ಲಿ ಶಿಕ್ಷಕನಾಗಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸುವ ಗುರುವಾದರೆ ಮತ್ತೊಂದೆಡೆ ಭಕ್ತ ಜನರಿಗೆ ಆತ್ಮೋನ್ನತಿಯ ಮಾರ್ಗವನ್ನು ತೋರಿಸುವ ಗುರುವಾಗಿದ್ದಾನೆ.

12ನೇ ಶತಮಾನದ ವಚನಕಾರ ಅಲ್ಲಮನ ತಾತ್ವಿಕ ನೆಲೆಯಲ್ಲಿ ಚಿಂತಿಸುವ ತಿಪ್ಪಣ್ಣ ತಾತಾ ರಚಿಸಿದ ತತ್ವಪದಗಳನ್ನ ರಾಯಚೂರಿನ ಭಜನಿ ಮಂಡಳಿಗಳಲ್ಲಿ ಇಂದಿಗೂ ಹಾಡುತ್ತಾರೆ. ಈತನ ತತ್ವಪದಗಳ ಅಂಕಿತನಾಮ 'ಶ್ರೀ ಗುರು ಹನುಮೇಶ' ಎಂಬುದಾಗಿದೆ. ಈತನ ಅನೇಕ ಶಿಷ್ಯರು ತತ್ವಪದಗಳನ್ನು ರಚಿಸಿದ್ದಾರೆ.

**ಅಂಬಿಗ । ಅಂಬಿಗ । ಅಂಬಿಗ ।**
**ಎಲ್ಲಾ ದೇಹದೊಳಗೆ ಐದಾನಂಬಿಗ ॥ಪ॥**

ಏಳು ಕೋಟೆಯೊಳಗಿರುವನಂಬಿಗ ।
ಸಪ್ತ ನದಿಯೊಳಗೈದಾನಂಬಿಗ ॥
ನೀರಿಲ್ಲದ ಹೊಳೆಯಾಗ ಅಂಬಿಗ ।
ಒಂದು ಹರಿಗೋಲ ಹಾಕ್ಯನಂಬಿಗ ॥1॥
ಬಿರುಗಾಳಿ ಬೀಸಿತ್ತು ಅಂಬಿಗ ।
ಅಲ್ಲಿ ಹುಟ್ಟುಗಾರನೊಬ್ಬ ಸತ್ತನಂಬಿಗ ।
ಹರಿಗೋಲು ಮುಳುಗಿತು ಅಂಬಿಗ ।
ಮೂರು ಝುಂಡಾ ಹಾರಿ ಹೋಗ್ಯಾವಂಬಿಗ ॥2॥
ನೂರಾ ಎಂಟು ಜನರು ಅಂಬಿಗ ।
ಅವರು ಪತ್ತೆಯಿಲ್ದೆ ಸತ್ತು ಹೋಗ್ಯಾರಂಬಿಗ ।
ಆನರು ಸತ್ತು ಪ್ರಾಣ ಹೋಗ್ಯಾದಂಬಿಗ ।
ಪ್ರಾಣ ಹೋಗಿ ಜೀವ ಉಳಿದಾದಂಬಿಗ ॥3॥
ಮೇಲಗಿರಿಯ ಬೆಟ್ಟದ ಮೇಲೆ ಅಂಬಿಗ ।
ಅಲ್ಲಿ ಹತ್ತು ವರ್ಣದ ಝುಂಡಾವಿದೆ ಅಂಬಿಗ ।
ಹನ್ನೊಂದುಳಿದು ಆನಂದಾಗ್ಯಾನಂಬಿಗ ।
ಅಲ್ಲಿ ಹನ್ನೆರಡಳಿದು ಹೋಗಿ ಹೊಂದ್ಯಾನಂಬಿಗ ॥4॥
ಆತ್ಮದ ಅಂತ್ಯಕ್ಕಿಳಿದಾನಂಬಿಗ ।
ಅಲ್ಲಿ ಸತ್ತು ಹುಟ್ಟದಂಗ ಆಗ್ಯಾನಂಬಿಗ ।
ಬಲ್ಲ ಜ್ಞಾನಿಗೆ ಗೊತ್ತು ಅಂಬಿಗ ।
ಇದನ್ನ ಯೋಗಬಲ್ಲವರು ಹೇಳ್ಯಾರಂಬಿಗ ॥5॥
ವಾಸುಳ್ಳ ಮಲಿಯಾಬಾದು ಅಂಬಿಗ ।
ಶರಣ ತಿಪ್ಪಣ್ಣ ಹೇಳ್ಯಾನಂಬಿಗ ॥
ವಸುಧಿ ರಾಜೂರು ವಾಸನಂಬಿಗ ।
ಶ್ರೀ ಗುರು ಹನುಮೇಶ ಬಲ್ಲನಂಬಿಗ ॥6॥

**3. ಯರಮಾರೆಪ್ಪ:**

ಯರಮಾರೆಪ್ಪನ ಕಾಯಕನಿಷ್ಠೆ, 12ನೇ ಶತಮಾನದ ಮಾದರ ಚನ್ನಯ್ಯ, ಮಾದರ ಧೂಳಯ್ಯ ಮತ್ತು ಹರಳಯ್ಯ ವಚನಕಾರರ ಕಾಯಕ ತತ್ವವನ್ನು ನೆನಪಿಸುತ್ತದೆ. ತನ್ನ ಕುಲಕಸುಬಿನ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾನೆ. ಈತನಿಗೆ ಜಹೀರಾಬಾದ್ ತಿಪ್ಪಣ್ಣ ತಾತಾನೆ ಗುರು. ಕಾಯಕ ಜೀವಿಯಾಗಿ ಬದುಕಬೇಕೆಂಬ ಆಶಯವನ್ನು ತತ್ವಪದಕಾರನು ತನ್ನ ಹಾಡುಗಳಲ್ಲಿ ದೃಷ್ಟಾಂತ ಮತ್ತು ಸಂಕೇತಗಳ ಮೂಲಕ ವ್ಯಕ್ತಪಡಿಸಿದ್ದಾನೆ. ಪರಮಾತ್ಮನಿಗಿಂತಲೂ ಜೀವಾತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ.

ತಾನು ವೃತ್ತಿ ಮತ್ತು ಜಾತಿಯಿಂದ ಹೀನನಲ್ಲ ಎಂದು ಧ್ವನಿಸುವ ಯರಮಾರೆಪ್ಪನ ಮಾತು ಚಾತುರ್ವರ್ಣ ವ್ಯವಸ್ಥೆಗೆ ಸವಾಲಾಗಿದೆ. ಗುರುವಿನ

ನಾಮವನ್ನು ನೆನೆಯದೆಯಿರುವ ಮನುಷ್ಯನು ಹೀನನೇ ಹೊರತು ಕೆಳಜಾತಿಯಲ್ಲಿ ಹುಟ್ಟಿದವನು ಹೀನನಲ್ಲವೆಂಬ ಸಂಗತಿಯನ್ನು ಸ್ಪಷ್ಟಪಡಿಸುತ್ತಾನೆ.

**ತಿಳಿದು ನೋಡಲೋ ನಿನ್ನೊಳಗೆ ನೀನು । ತಿಳಿದು ನೋಡಲೊ**
**ತಿಳಿದು ನೋಡು ನಿನ್ನ ಒಳಗೆ ನುಡಿಯುತ್ತಿರುವ ನಾಮವನ್ನು**
**ಮೋದದಿಂದ ಕೂಗುತಿರುವ ನಾದವನ್ನು ಕೇಳು ನೀನು ॥ಪ॥**
**ಕಣ್ಣು ಮುಚ್ಚಲು ನಿನ್ನೊಳಗ ನೀನು ದೃಷ್ಟಿ ನೆಟ್ಟಲು**
**ಕಣ್ಣು ಮುಚ್ಚಿ ನೋಡು ನಿನ್ನ ದೃಷ್ಟಿಯೋಳು ಕಾಣುತಿರುವ**
**ನಾದಬಿಂದು ಕಳಾತೀತ ಯೋಗವನ್ನು ಮಾಡು ನೀನು ॥1॥**
**ಏಳು ನೆಲೆಗಳು ಅಲ್ಲಿರುವ ಸ್ಥಾನ ಏರಿ ನೋಡಲೊ**
**ಏಳು ನೆಲೆಗಳೇರಿ ನೋಡು ಇರುವ ಸ್ಥಾನ ತಿಳಿದು ನೋಡು**
**ಸ್ಥಾನವಿಲ್ಲದೆ ಕಾಣುತಿರುವ ಬೆಳಕಿನೊಳು ಆಡು ನೀನು ॥2॥**
**ಜಹೀರಾಬಾದದೊಳಗ ಅನುಭವ ಮಂಟಪದೊಳಗ**
**ರಾಯಚೂರು ಊರಿನೊಳಗ ತತ್ವಸಾರುತಿರುವಂತಹ**
**ಶಿವಯೋಗಿ ತಿಪ್ಪಣ್ಣಯ್ಯನ ನಾಮವ ನುಡಿ ನೀನು ॥3॥**

### 4. ಹೊಸೂರು ತಿಪ್ಪಣ್ಣ:

ರಾಯಚೂರು ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಕ್ರಿ.ಶ. 1942ರಲ್ಲಿ ಜನಿಸಿದನು. ಈತನ ತಂದೆ ದುರ್ಗಪ್ಪ ಮತ್ತು ತಾಯಿ ಮಲ್ಲಮ್ಮ ಮತ್ತು ಹೆಂಡತಿ ಶರಣಮ್ಮ. ಸಂಸಾರಿಯಾಗಿದ್ದ ತಿಪ್ಪಣ್ಣನು ಅನುಭಾವಿ ಕವಿಯಾಗಿದ್ದಾನೆ. ತಿಪ್ಪಣ್ಣ ತಾತಾನೊಂದಿಗೆ ಕೂಡಿ ಧಾರ್ಮಿಕ ಕಾರ್ಯಗಳಲ್ಲಿ ನಿರತನಾಗಿರುತ್ತಾನೆ. ತಿಪ್ಪಣ್ಣ ಶಿಕ್ಷಕರ ತರಬೇತಿ ಪಡೆದು ರಾಯಚೂರಿನ ಹಾಸ್ಮಿಯಾ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿದ್ದನು. 'ನವಪುರಜಾತ' ಎಂಬ ಅಂಕಿತದಲ್ಲಿ ತತ್ವಪದಗಳನ್ನು ರಚಿಸಿದ್ದಾನೆ. ಪ್ರತಿಯೊಂದು ಹಾಡಿನ ಅಂತ್ಯದಲ್ಲಿ ಗುರುಹನುಮೇಶನನ್ನು ಸ್ಮರಿಸಿದ್ದಾನೆ.

ಈತನ ಒಟ್ಟು 19 ಹಾಡುಗಳಲ್ಲಿ 7 ಹಾಡುಗಳು ಗುರು ಮಹಿಮೆ ಕುರಿತಿವೆ. ಉಳಿದ ಹಾಡುಗಳು ಅನುಭಾವ ವಿಷಯಕ್ಕೆ ಸಂಬಂಧಿಸಿವೆ. ಗುರುವಿನ ಬೋಧನೆ ಹಾಗೂ ದೀಕ್ಷೆಯಿಂದ ತನ್ನಲ್ಲಿ ಉಂಟಾದ ಪರಿವರ್ತನೆಯ ಕುರಿತು ತಿಳಿಸುತ್ತಾನೆ. 'ಪರಮಾತ್ಮನ ನೆಲೆ' ತಿಳಿಯೋ ಎಂದು ಭಕ್ತರನ್ನು ಉದ್ದೇಶಿಸಿ ಹೇಳುತ್ತಾನೆ. 'ನಾಲಿಗಿಲ್ಲದ ಗಂಟೆ ನುಡಿತಿದೆ ಕವನ ಆಲಿಸಿ ಅನುದಿನ ಮಾಡು ಸಾಧನ' ಎಂದು ಆಧ್ಯಾತ್ಮಿಕವಾಗಿ ನುಡಿಯುತ್ತಾನೆ.

**ಶಿವನ ಸ್ಮರಣೆ ಮಾಡು ಜವದಿ ।**
**ದೇವಾಧಿದೇವ ನೀನಾಗುವಿ ಭರದಿ ।**
**ದೇವಾಧಿದೇವ ನೀನಾಗುವಿ ಭರದಿ ॥ಪ॥**
**ನೆಲೆಯ ತಿಳಿಯೋ ಪರಮಾತ್ಮನ ।**

ನಾಲಿಗಿಲ್ಲದ ಗಂಟೆ ನುಡಿತಿದೆ ಕವನ ॥
ಆಲಿಸಿ ಅನುದಿನ ಮಾಡು ಸಾಧನ ॥1॥
ಆರರ ಕೊನೆಯಲ್ಲಿ ಇರುವ ಉಸಿರನ್ನ ।
ಅರಿತು ಪೂಜೆಯ ಮಾಡಲು ಮುಂದಿನ ।
ದಾರಿಯ ತೋರ್ವನು ಸುಲಭದಿತಕ್ಷಣ ॥2॥
ಭ್ರೂ ಮಧ್ಯದೋಳು ಕಪಿಯ ನಿಲ್ಲಿಸು ।
ಶ್ಯಾಮ ಸುಂದರ ಅಜಹರನ ಧ್ಯಾನಿಸು ।
ತ್ರೈಮೂರ್ತಿಗಳ ಶಕ್ತಿಯ ಗಳಿಸು ॥3॥
ಮಕರಂದ ಬೀರುವ ಸ್ಥಳದೋಳ್ ಸುಳಿದು ।
ಅಕ್ಕರಿದ ಸುರ ಪಾನವ ಸವಿದು ।
ಮುಕುಂದನ ವಿರುದಾಂಕಿತ ಪಡೆದು ॥4॥
ಪೊಡವಿಯೋಳು ರಾಜೂರು ಪ್ರಭು ಹನುಮೇಶನ ।
ಅಡಿಗಳ ಪೂಜಿಪ ನವಪುರಜಾತನು ॥
ಗಡನೆ ಪಡೆದನು ಗುರು ಕರುಣವನು ॥5॥

## 5. ಕಲ್ಮಲಾ ತಾಯಣ್ಣ:

ಮಾದಿಗ ಜನಾಂಗಕ್ಕೆ ಸೇರಿದ ತಾಯಣ್ಣ, 1943ರಲ್ಲಿ ರಾಯಚೂರು ತಾಲ್ಲೂಕಿನ ಕಲ್ಮಲಾದಲ್ಲಿ 'ಬಿಂಗಾಣಿ' ಎಂಬ ಅಡ್ಡ ಹೆಸರಿನ ಕುಟುಂಬದಲ್ಲಿ ಜನಿಸಿದ ಈತನು ಮ್ಯಾಟ್ರಿಕ್‌ವರೆಗೆ ಓದಿ ಸರಕಾರಿ ಕಂದಾಯ ಇಲಾಖೆಯಲ್ಲಿ ಎರಡನೇ ದರ್ಜೆ ಸಹಾಯಕನಾಗಿ ಸೇವೆ ಸಲ್ಲಿಸಿದ್ದ. ಜಹೀರಾಬಾದ್ ತಿಪ್ಪಣ್ಣ ತಾತನ ಶಿಷ್ಯನಾಗಿದ್ದ ತಾಯಣ್ಣ ಅನೇಕ ತತ್ವಪದಗಳನ್ನು ರಚಿಸಿದ್ದಾನೆ. ಆದರೆ ಈತನ ಮೂರು ತತ್ವಪದಗಳು ಮಾತ್ರ ದೊರಕಿವೆ. ಈತನ ತತ್ವಪದದ ಅಂಕಿತನಾಮ 'ಕಲ್ಮಲಾ ತಾಯಣ್ಣ' ಮತ್ತು 'ಗುರು ತಿಪ್ಪಣ್ಣ' ಎಂಬುದಾಗಿದೆ.

ಯಾರಿಗ್ಹೇಳಲಮ್ಮ ತಂಗಿ ।
ಯಾರಿಗ್ಹೇಳದ ಸುದ್ದಿ ತಂಗಿ ॥ಪ॥
ಯಾರಿಗ್ಹೇಳುಲಮ್ಮ ಯಾರಿಗ್ಹೇಳದ ಸುದ್ದಿ ।
ಮನೆಯೊಳಗಿನ ಗಂಡ ಮಾಡಿದ ಹರಣ ॥1॥
ಏಕಾಂತ ಸ್ಥಳವಮ್ಮ ತಂಗಿ ।
ಅಲ್ಲಿಗೆ ಕರೆದೊಯ್ದು ತಂಗಿ ।
ಮೊದಲ ದಿನದಂದು ಮುದ್ದಿಟ್ಟ ಮೋಹವದು
ವಶಳಾಗಿ ತೋಳಲ್ಲಿ ಬಿದ್ದೇನೆ ತಂಗಿ ॥2॥
ಊರ ಮುಂದಿನ ಗುಡಿಯು ತಂಗಿ ।
ಉಪಪತಿಯು ದೇವಾ ತಂಗಿ ॥
ಅಲ್ಲಿಗೆ ಕರೆದೊಯ್ದು ನನ್ನ ತೋಳಲಿ ಎಳೆದು ।
ಬಿಗಿದು ಅಪ್ಪಿದನೇ ತಂಗಿ ॥3॥
ಮೋಸದ ಮನೆಯಮ್ಮ ತಂಗಿ ।

ಜಾಗ್ರತೆ ನಡೆಯಮ್ಮ ತಂಗಿ ।
ಕಣ್ಣಲ್ಲಿ ಕಣ್ಣಿಟ್ಟು ಸಿರಿಯು ಮುಂದಿಟ್ಟು ।
ಮರಳು ಮಾಡಿದನೇ ತಂಗಿ ॥4॥
ಅಟ್ಟದ ಮನೆಯಮ್ಮ ತಂಗಿ ।
ಮೆಚ್ಚಾಗಿ ಕೂತಿದ್ದೇನೆ ತಂಗಿ ॥
ಕೇಶರಾಶಿಯ ಜಗ್ಗಿ ನನ್ನ ಮೇಲೆ ನುಗ್ಗಿ ।
ತೋಳಲಿ ಎತ್ತಿದನೋ ತಂಗಿ ॥5॥
ಆನಂದ ಸಮಯವು ತಂಗಿ ।
ಅದೆಷ್ಟು ಸೊಗಸಮ್ಮ ತಂಗಿ ।
ನನ್ನ ಬತ್ತಲೆ ಮಾಡಿ ಮೋಹದಿಂದ ಕೂಡಿ ।
ನನ್ನ ಕೂಡಿದನೇ ತಂಗಿ ॥6॥
ಧರೆಯೋಳು ಮರೆಯುವ ತಂಗಿ ।
ಕಲ್ಮಲಾ ಗ್ರಾಮವು ತಂಗಿ ॥
ಶಿಷ್ಯ ತಾಯಣ್ಣನು ಗುರು ಹನುಮೇಶನ ।
ಕೂಡಿದ ಪರಿಯು ತಂಗಿ ॥7॥

## ಪರಾಮರ್ಶನ ಗ್ರಂಥಗಳು:

1. ಮೀನಾಕ್ಷಿ ಬಾಳಿ, (2017), ಕಡಕೋಳ ಮಡಿವಾಳಪ್ಪ ಮತ್ತು ಶಿಷ್ಯರ ತತ್ವಪದಗಳು, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.
2. ವಿಜಯಶ್ರೀ ಸಬರದ, (1997), ಗುರು ಶಿಷ್ಯರ ತತ್ವಪದಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.